**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ**
**ಅಫಜಲಪೂರ**

ಸಿಸಿ ನಂ.196/2014

ಚಾಸಾ-7 ಪ್ರಾಸಾ-8

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು
ದಿನಾಂಕ: 26.11.2019

| | | |
|---|---|---|
| ಹೆಸರು | ಃ | ಮರಳಸಿದ್ದಪ್ಪ |
| ತಂದೆ ಹೆಸರು | ಃ | ಅಂದಾನಪ್ಪ |
| ವಯಸ್ಸು | ಃ | 65-ವರ್ಷ |
| ಉದ್ಯೋಗ | ಃ | ಖಾಸಗಿ ಕೆಲಸ |
| ವಾಸಸ್ಥಳ | ಃ | ಹಾಸನ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

2010 ರಿಂದ ಮೇ-2015 ರವರೆಗೆ ಗೋಡನ ಕಿಪರ್ ಎಂದು ಕೆಲಸ ಮಾಡಿದ್ದೇನೆ. 2010 ರಲ್ಲಿ 1 ನೇ ಆರೋಪಿತನು ಲಾರಿ ನಂ.ಕೆಎ-25/ಬಿ-2247 ರಲ್ಲಿ ಗೊಡಾನನಿಂದ 50 ಕೆಜಿಯ 460 ಸಕ್ಕರೆ ಚೀಲಗಳನ್ನು ಲಾರಿ ತುಂಬಿಸಿಕೊಂಡು ಬೇರೆ ಕಡೆಗೆ ಹೋಗಿ ಮಾರಾಟ ಮಾಡಿರುತ್ತಾನೆ. ಲಾರಿ ಚಾಲಕರ ಹೆಸರು ನೆನಪಿಲ್ಲ. ಘಟನೆ ಕುರಿತು ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ವಿನಂತಿಸಿದ್ದು, ಅಭಿಯೋಜನೆ ಪರ ಇರುವ ಕಾಗದ ಪತ್ರಗಳನ್ನು ಪರಿಶೀಲಿಸಿ ಪಾಟಿ ಸವಾಲಿಗೆ ಅನುಮತಿಸಲಾಯಿತು.)

ಪಾಟಿ ಸವಾಲುಃ ಎಪಿಪಿ ಯವರಿಂದ

ಆರೋಪಿತರು ಲಾರಿ ನಂಬರ ಪ್ಲೇಟನ್ನು ಬದಲಾವಣೆ ಮಾಡಿ ಗೊಡಾನನಿಂದ 50 ಕೆಜಿಯ 460 ಸಕ್ಕರೆ ಚೀಲಗಳನ್ನು ಲಾರಿ ತುಂಬಿಸಿಕೊಂಡು ಬೇರೆ ಕಡೆಗೆ ಹೋಗಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಆರೋಪಿತರ ಭಾವಚಿತ್ರಗಳನ್ನು ನನಗೆ ತೋರಿಸಿದ್ದು ನಾನು ಅವರನ್ನು ಗುರುತಿಸಿರುತ್ತೇನೆ ಎಂದರೆ ಸರಿ. ಸಾಕ್ಷಿ ಲಾರಿಯ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-20 ಎಂದು ಗುರುತಿಸಲಾಯಿತು.

ಪಾಟಿ ಸವಾಲುಃ ಆರೋಪಿತನ ಪರ ಶ್ರೀ ಪಿಬಿಪಿ ವಕೀಲರಿಂದ

2010 ರಲ್ಲಿ 1 ನೇ ಆರೋಪಿತನು ಲಾರಿ ನಂ.ಕೆಎ-25/ಬಿ-2247 ರಲ್ಲಿ ಗೊಡಾನನಿಂದ 50 ಕೆಜಿಯ 460 ಸಕ್ಕರೆ ಚೀಲಗಳನ್ನು ಲಾರಿ ತುಂಬಿಸಿಕೊಂಡು ಬೇರೆ ಕಡೆಗೆ ಹೋಗಿ ಮಾರಾಟ ಮಾಡಿದ್ದು ಘಟನೆ ಕುರಿತು ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. 1 ನೇ ಆರೋಪಿತನು ನಂಬರ ಪ್ಲೇಟ ಬದಲಾಯಿಸಿ ಬೇರೆ ಕಡೆಗೆ ಸಕ್ಕರೆ ಚಿಲಗಳನ್ನು ಮಾರಾಟ ಮಾಡಿರುತ್ತಾನೆ ಎನ್ನುವ ವಿಷಯ ನನಗೆ ಗೊತ್ತಿಲ್ಲ. ಪೋಲಿಸರು ಆರೋಪಿತರ ಭಾವಚಿತ್ರಗಳನ್ನು ತೋರಿಸಿದ್ದು ಅವರನ್ನು ಗುರುತಿಸಿರುತ್ತೇನೆಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ಆರೋಪಿತರಿಗೂ ಹಾಗೂ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲದಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ ಇಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ